ಇ) ಕರ್ನಾಟಕ ಸರ್ಕಾರ ಕಿಯಾನಿಕ್ಸ್‌ಗೆ ಮಂಗಳೂರಿನಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ನ್ನು ಸ್ಥಾಪಿಸಲು ಒಪ್ಪಿಗೆ ನೀಡಿದ್ದಾರೆ. ಈ ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್‌ನಲ್ಲಿ ಆರ್ಸ್ಟೇಷನ್‌ನ್ನು ಕೂಡ ಸ್ಥಾಪಿಸಲು ಉದ್ದೇಶಿಸಿದೆ ಮತ್ತು ಇದರಿಂದ ರಫ್ತು ಹೆಚ್ಚುವುದು. ಇದರ ಯೋಜನಾ ವೆಚ್ಚ ಸುಮಾರು 3.5 ಕೋಟಿ ರೂ.ಗಳಾಗುವುದು. ಈ ವೆಚ್ಚವನ್ನು ಕರ್ನಾಟಕ ಸರ್ಕಾರದ ಅನುದಾನದಿಂದ ಪಡೆಯುವ ಯೋಜನೆಯಿದೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಗಳೂರು ಕ್ಷೇತ್ರಕ್ಕೆ ಬಿಡುಗಡೆಯಾದ ಹಣ.

22(227) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಗಳೂರು ಕ್ಷೇತ್ರಕ್ಕೆ ಹಣ ಬಿಡುಗಡೆಯಾಗದೇ ಇರುವುದರಿಂದ ಅಭಿವೃದ್ಧಿ ಚಟುವಟಿಕೆಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹಣ ಬಿಡುಗಡೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :—

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಮಂಗಳೂರು ನಗರದಲ್ಲಿ ವಿದ್ಯುತ್ ವಿತರಣಾ ಕೇಂದ್ರ ಹಾಗೂ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆ.

23 (226) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ನಗರದ ವಿದ್ಯುತ್ ವಿತರಣಾ ಕೇಂದ್ರ ಹಾಗೂ ವಿತರಣಾ ವ್ಯವಸ್ಥೆ ಸುಧಾರಿಸುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು? ಹಾಗೂ ಇದಕ್ಕೆ ತಗುಲಿದ ವೆಚ್ಚವೆಷ್ಟು?

ಅ) ಮಂಗಳೂರು ನಗರದಲ್ಲಿ ಕೊರತೆ ಇರುವ ಲೈನ್‌ಮೆನ್, ಜೆ.ಇ.ಗಳು ಹಾಗೂ ಇನ್ನಿತರ ಸಿಬ್ಬಂದಿಗಳ ನೇಮಕಾತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ವಿದ್ಯುತ್ ಬಿಲ್ ಪಾವತಿಗಾಗಿ ಸ್ವೀಕರಣಾ ಕೇಂದ್ರಗಳನ್ನು ಹೆಚ್ಚಿಸುವ ಬಗ್ಗೆ ಹಾಗೂ ವ್ಯವಸ್ಥೆ ಸುಧಾರಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂದನ ಸಚಿವರು) :—

ಅ) ಮಂಗಳೂರು ನಗರದ ವಿದ್ಯುತ್ ವಿತರಣಾ ಕೇಂದ್ರ ಹಾಗೂ ವಿತರಣಾ ವ್ಯವಸ್ಥೆ ಸುಧಾರಿಸಲು ಹಲವಾರು ಕಾರ್ಯಗಳನ್ನು ಹಮ್ಮಿಕೊಂಡಿದ್ದು, ಚಾಲನೆಗೊಳಿಸಲಾಗಿದೆ ಹಾಗೂ ಉಳಿದವುಗಳ ಕೆಲಸ ಪ್ರಗತಿಯಲ್ಲಿವೆ. ಅವುಗಳ ವಿವರಗಳನ್ನು ಈ ಕೆಳಗೆ ತಿಳಿಸಲಾಗಿದೆ.

1) <u>ಮಂಗಳ ಸ್ಟೇಡಿಯಂನಲ್ಲಿ:</u> 33:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ ಸ್ಥಾಪನೆ. 33:11 ಕೆ.ವಿ. 2 x 5 ಎಂ.ವಿಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು 1995-96 ಸಾಲಿನಲ್ಲಿಯೇ ಚಾಲನೆಗೊಳಿಸಲಾಗಿದೆ. ಇದಕ್ಕೆ ತಗುಲಿದ ವೆಚ್ಚ ರೂ. 261.78 ಲಕ್ಷಗಳಾಗಿರುತ್ತದೆ.

2) <u>ಕಂಕನಾರಿಯಲ್ಲಿ:</u> 33:11 ಕೆ.ವಿ. 2 x 5 ಎಂ.ವಿಎ. ಸಾಮರ್ಥ್ಯದ ವಿತರಣಾ ಕೇಂದ್ರವನ್ನು ದಿನಾಂಕ : 3.6.98 ರಂದು ಚಾಲನೆಗೊಳಿಸಲಾಗಿದೆ ಹಾಗೂ ಈ ಕಾಮಗಾರಿಗೆ ತಗುಲಿದ ವೆಚ್ಚ ರೂ.444.66 ಲಕ್ಷಗಳಾಗಿರುತ್ತದೆ.

3) <u>ನೆಹರು ಮೈದಾನದಲ್ಲಿ:</u> 33:11 ಕೆ.ವಿ. 2 x 5 ಎಂ.ವಿಎ. ಸಾಮರ್ಥ್ಯದ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದ್ದು, ದಿನಾಂಕ : 23.10.98ರಂದು ಮೊದಲನೆಯ ಪರಿವರ್ತಕವನ್ನು ಚಾಲನೆಗೊಳಿಸಲಾಗಿದೆ. ಎರಡನೆಯ ಪರಿವರ್ತಕವನ್ನು ಚಾಲನೆಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ಕಾಮಗಾರಿಗೆ ತಗುಲುವ ವೆಚ್ಚ ರೂ.313.40 ಲಕ್ಷಗಳಾಗಿರುತ್ತದೆ.

4) <u>ಬೈಕಂಪಾಡಿಯಲ್ಲಿ:</u> 110: 33:11 ಕೆ.ವಿ. 4 x 10 ಎಂ.ವಿಎ. ಸಾಮರ್ಥ್ಯದ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಅನುಮೋದನೆ ದೊರೆತಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ. ಈ ಕಾಮಗಾರಿಗೆ ತಗುಲುವ ವೆಚ್ಚ ರೂ.470.30 ಲಕ್ಷಗಳಾಗಿರುತ್ತದೆ. ಹಾಗೂ ಈ ವಿತರಣಾ ಕೇಂದ್ರವನ್ನು ಸೆಪ್ಟೆಂಬರ್-99 ರಲ್ಲಿ ಚಾಲನೆಗೊಳಿಸುವ ನೀರಿಕ್ಷೆ ಇದೆ.

5) <u>ಕಾಮಾರಿನಲ್ಲಿರುವ :</u> 33:11 ಕೆ.ವಿ. 2 x 5 ಎಂ.ವಿಎ. ಸಾಮರ್ಥ್ಯದ ಪರಿವರ್ತಕಗಳನ್ನು 110:11 1 x 20 ಎಂ.ವಿಎ. ಸಾಮರ್ಥ್ಯಕ್ಕೆ ಉನ್ನತೀಕರಿಸಲಾಗಿದೆ. ಇದಕ್ಕೆ ತಗುಲುವ ವೆಚ್ಚ ರೂ.91 ಲಕ್ಷಗಳಾಗುತ್ತದೆ.

6) ಹಾಗೂ ಯು.ಪಿ.ಐ.ಎಸ್. ಯೋಜನೆಯಡಿಯಲ್ಲಿ 59.8 ಕಿ.ಮೀ. ವಿದ್ಯುತ್ ಮಾರ್ಗಗಳ ಧಾರಣಾ ಶಕ್ತಿಯಲ್ಲಿ ಸಾಮರ್ಥ್ಯ ವೃದ್ಧಿ 59 ವಿದ್ಯುತ್ ವಿತರಣಾ ಪರಿವರ್ತಕಗಳ ಸಾಮರ್ಥ್ಯ ವೃದ್ಧಿ, 29.22 ಕಿ.ಮೀ. ಭೂಗತ ಕೇಬಲ್ ಮತ್ತು 23.57 ಕಿ.ಮೀ. ಓವರ್‌ಹೆಡ್ ಹೊಸ 11 ಕೆ.ವಿ. ಲೈನುಗಳ ನಿರ್ಮಾಣ, 180 ಹೊಸ ಪರಿವರ್ತಕಗಳ ಆಳವಡಿಕೆ, ಎಂಟು 11 ಕೆ.ವಿ. ಆರ್.ಎಮ್.ಯೂಗಳ ನಿರ್ಮಾಣ, 10.892 ಕಿಮೀ. 23 ಕೆ.ವಿ. ಭೂಗತ ಕೇಬಲ್‌ಗಳ ನಿರ್ಮಾಣ ಕಾರ್ಯಗಳನ್ನು ನಿರ್ವಹಿಸಿದ್ದು, ಈ ಎಲ್ಲಾ ಕಾರ್ಯಗಳಿಗೆ ತಗುಲಿದ ವೆಚ್ಚ ರೂ. 25.16 ಕೋಟಿಗಳಾಗಿರುತ್ತದೆ.

ಅ) ಮಂಗಳೂರು ನಗರದಲ್ಲಿ ಕೊರತೆ ಇರುವ ಹುದ್ದೆಗಳ ಪೈಕಿ ಈ ಕೆಳಕಂಡ ಹುದ್ದೆಗಳನ್ನು ನೇಮಕಾತಿ ನಿಯಮಗಳನ್ನು ಪಾಲಿಸಿ ಈಗಾಗಲೇ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

1)	ಕಿರಿಯ ಇಂಜಿನಿಯರ್	- 2	ಹುದ್ದೆಗಳು
2)	ಮೀಟರ್ ರೀಡರ್ : ಆಪರೇಟ್ : ಓವರ್‌ಸೀಯರ್	- 4	"
3)	ಡ್ಯೆವರ್ ಗ್ರೇಡ್ - 2	- 2	"
4)	ಟೈಪಿಸ್ಟ್	- 3	"
5)	ಸಹಾಯಕ ಲೈನ್‌ಮ್ಯಾನ್	- 36	"
	ಪ್ರೊಬೇಷನರಿ ಮಜ್ದೂರ್	- 22	"
6)	ಸ್ಟೇಷನ್ ಅಟೆಂಡೆಂಟ್ ಗ್ರೇಡ್ - 2	- 4	"
	ಒಟ್ಟು	- 73	ಹುದ್ದೆಗಳು

ಇ) ವಿದ್ಯುತ್ ಬಿಲ್ ಪಾವತಿಗಾಗಿ ಗ್ರಾಹಕರಿಗೆ ತೊಂದರೆಯಾಗದಂತೆ ಸಾಕಷ್ಟು ಕಡೆ ಕ್ಯಾಷ್ ಕೌಂಟರ್‌ಗಳನ್ನು ತೆರೆಯಲಾಗಿದೆ. ಹೆಚ್ಚು ಒತ್ತಡ ಇರುವ ಕಡೆ ಹೆಚ್ಚುವರಿ ಕ್ಯಾಷ್ ಕೌಂಟರ್‌ಗಳನ್ನು ತೆರೆಯಲು ವಿರ್ಪಾಡು ಮಾಡಲಾಗಿದೆ. ಎರಡನೇ ಶನಿವಾರ, ಭಾನುವಾರ ಮತ್ತು ಘೋಷಿತ ರಜಾ ದಿನಗಳಂದೂ ಸಹ ವಿದ್ಯುತ್ ಗ್ರಾಹಕರ ಅನುಕೂಲಕ್ಕಾಗಿ ಕ್ಯಾಷ್ ಕೌಂಟರ್‌ಗಳನ್ನು ತೆರೆಯಲು ಆದೇಶ ನೀಡಲಾಗಿದೆ.